ಒಂದು ದಿನದ ರಾಷ್ಟ್ರೀಯ ವಿಚಾರ ಸಂಕಿರಣ

ಗುರುವಾರ, ಮಾರ್ಚ್ 10, 2016





# ಕಿರುತೆರೆ ಮಾಧ್ಯಮ

## ಸಮಾಜ ಎದುರಿಸುತ್ತಿರುವ ಸವಾಲುಗಳು

Scanned by CamScanner

# ಪ್ರಸ್ತುತ ಸನ್ನಿವೇಶದಲ್ಲಿ ಜ್ಯೋತಿಷ್ಯ, ಅಧ್ಯಾತ್ಮ ಮತ್ತು ಧಾರ್ಮಿಕ ಕಾರ್ಯಕ್ರಮಗಳ ಸ್ವರೂಪ

ಪ್ರೊ|| ನಾರಾಯಣಸ್ವಾಮಿ ಎಸ್. ಜಿ.
ಉಪ ಪ್ರಾಂಶುಪಾಲರು, ಕನ್ನಡ ವಿಭಾಗ
ವಿ.ಇ.ಟಿ. ಪ್ರಥಮ ದರ್ಜೆ ಕಾಲೇಜು, 14ನೇ ಮುಖ್ಯರಸ್ತೆ, 2ನೇ ಹಂತ
ಜೆ.ಪಿ. ನಗರ, ಬೆಂಗಳೂರು – 560 078. ಮೊ: 9901844709 e-mail: dhruthiknswamy@gmail.com

ಆಧುನಿಕ ಜಗತ್ತಿನಲ್ಲಿ ಜನಸಾಮಾನ್ಯರು ಜ್ಯೋತಿಷ್ಯ ಶಾಸ್ತ್ರದ ಬಗ್ಗೆ ಒಲವು ಕಡಿಮೆಯಾಗದಿರುವುದು ಇಂದಿಗೂ ಹೆಚ್ಚು ಪ್ರಾಶಸ್ತ್ಯ ಪಡೆದುಕೊಂಡಿದೆ. ವಿಚಾರವಾದಿಗಳು, ನಾಸ್ತಿಕರು, ಪ್ರಗತಿಚಿಂತಕರು, ಸಮಾಜವಾದಿ ಧೋರಣೆವುಳ್ಳವರ ನಡುವೆಯು ಜ್ಯೋತಿಷ್ಯಶಾಸ್ತ್ರದ ನಂಬಿಕೆ ಎಲ್ಲಾ ವರ್ಗದ ಜನರಲ್ಲೂ ಚಲನಶೀಲವಾಗಿಯೇ ಇದೆ. ಮನುಷ್ಯನ ದಿನನಿತ್ಯ ಬದುಕಿನ ಬವಣೆ, ಸುಖ, ನೆಮ್ಮದಿ, ಲಾಭ, ನಷ್ಟ ಇತರೆ ಜೀವನ ಕ್ರಮದ ಮೇಲೆ ಜ್ಯೋತಿಷ್ಯ ಗಾಢ ಪ್ರಭಾವ ಹೊಂದಿರುವುದು ಕಂಡುಬರುತ್ತಿದೆ. ವ್ಯಕ್ತಿಯ ಹುಟ್ಟಿನ ಆಧಾರದ ಮೇಲೆ ಆತನ ಜ್ಯೋತಿಷ್ಯ ನಿರ್ಧಾರವಾಗುತ್ತದೆ ಎಂಬುದು ಸಾಮಾನ್ಯ ತಿಳುವಳಿಕೆ ಆತನಲ್ಲಿ ಬೇರೂರಿದೆ. ಪುರಾತನ ಕಾಲದಿಂದಲೂ ಜ್ಯೋತಿಷ್ಯದ ಬಗ್ಗೆ ಸಾಮಾನ್ಯರು, ರಾಜರು, ಮೇಲ್ವರ್ಗದ ಜನರು ನಂಬಿಕೆ ಇಟ್ಟುಕೊಂಡಿದ್ದಾರೆ. ರಾಜರ ಪಟ್ಟಾಭಿಷೇಕ, ಪುತ್ರ ಜನನ, ವಿವಾಹ, ಯುದ್ಧ ಸಂದರ್ಭ, ಅಶ್ವಮೇಧಯಾಗ, ಇಂತಹ ಸಂದರ್ಭಗಳಲ್ಲಿ ಜ್ಯೋತಿಷ್ಯ ಶಾಸ್ತ್ರದ ನಂಬಿಕೆಯ ಆಧಾರದಲ್ಲಿ ಕಾರ್ಯಗಳನ್ನು ಕೈಗೊಳ್ಳುತ್ತಿದ್ದರು. ಜ್ಯೋತಿಷ್ಯ ಶಾಸ್ತ್ರದ ಆಧಾರದಲ್ಲಿಯೇ ಮನುಷ್ಯನ ಹಣೆಬರಹ ನಿರ್ಧರಿತವಾಗುತ್ತದೆ ಎಂದು ಪರಂಪರಾಗತವಾಗಿ ನಂಬಿಕೆ ಉಳಿಸಿಕೊಂಡು ಬಂದಿರುವುದನ್ನು ಕಾಣಬಹುದಾಗಿದೆ.

ಈಗಿನ ವೈಜ್ಞಾನಿಕ ಯುಗದಲ್ಲಿ ಮನುಷ್ಯ ಅಪರಿಮಿತವಾದ ಅನ್ವೇಷಣೆ ಸಾಧನೆ ಮಾಡಿದ್ದರು, ದೇವರ ಮೇಲಿನ ನಂಬಿಕೆ, ಪವಾಡ, ಮಾಟಮಂತ್ರ, ದೇವರು ಇರುವ ಬಗ್ಗೆ, ತನ್ನ ಗ್ರಹಚಾರಗಳ ಬಗ್ಗೆ, ಪಾಪಕರ್ಮಗಳು, ಸಂತಾನ ಪ್ರಾಪ್ತಿ, ಮದುವೆ, ಉದ್ಯೋಗ, ಸಂಪತ್ತುಗಳಿಕೆ, ಮನೆಕಟ್ಟುವುದು, ಆರೋಗ್ಯ ಹಲವಾರು ಜೀವನಕ್ರಮದ ಮೇಲೆ ಜ್ಯೋತಿಷ್ಯದಲ್ಲಿನ ನಂಬಿಕೆ ಮೂಲಕ ತನ್ನ ಬದುಕನ್ನು ನಡೆಸಿಕೊಂಡು ಹೋಗುತ್ತಿದ್ದಾನೆ. ಈಗಿನ ಸುದ್ದಿವಾಹಿನಿಗಳು ಮನುಷ್ಯನ ಜ್ಯೋತಿಷ್ಯದ ಮೇಲಿನ ನಂಬಿಕೆಯನ್ನು ಲಾಭಗಾರಿಕೆ ಉದ್ದಿಮೆಯನ್ನಾಗಿ ಮಾಡಿಕೊಂಡ ಜ್ಯೋತಿಷ್ಯ ಪಂಡಿತರ ಮೂಲಕ ಕಾರ್ಯಕ್ರಮ ಆಯೋಜಿಸಿ ವೀಕ್ಷಕರನ್ನು ಆಕರ್ಷಣೆಗೆ ನಂಬಿಕೆಗೆ ಒಳಪಡಿಸುವುದು. ಅದರಲ್ಲೂ ದೇವರು ಮತ್ತು ಜ್ಯೋತಿಷ್ಯವನ್ನು ನಂಬುವ ಆಚರಣೆ ಮಾಡುವ ಮಹಿಳೆಯರನ್ನು ಸೆಳೆಯುತ್ತಿರುವುದು ನಿರಂತರವಾಗಿ ನಡೆಸಿಕೊಂಡು ಬಂದಿರುತ್ತವೆ. (ಸುದ್ದಿವಾಹಿನಿಗಳು ಜನರ ಧಾರ್ಮಿಕ ಆಚರಣೆಯನ್ನು ತನ್ನ ಕಾರ್ಯಕ್ರಮಗಳಲ್ಲಿ) ಸುದ್ದಿವಾಹಿನಿಗಳು ಧಾರ್ಮಿಕ ಪಂಡಿತರ ಪ್ರವಚನದ ಪ್ರಸಾರವನ್ನು, ಹಬ್ಬ, ಆಚರಣೆ ಇತ್ಯಾದಿಗಳನ್ನು ನಡೆಸುವಂತೆ ಪ್ರಭಾವ ಬೀರುವುದು. ಇದರಿಂದ ಸುದ್ದಿವಾಹಿನಿ ನೋಡುಗರ ಸಂಖ್ಯೆಯನ್ನು ಹೆಚ್ಚಿಸಿಕೊಳ್ಳುವುದು. ಈ ಕಾರ್ಯಕ್ರಮಗಳ ಮೂಲಕ ದೊಡ್ಡ ಜಾಹಿರಾತು ಕಂಪನಿಗಳಿಂದ ಹಣಗಳಿಸುವುದು ವಾಹಿನಿಗಳ ಮುಖ್ಯ ಉದ್ದೇಶವಾಗಿರುವುದು ಮುಚ್ಚಿಟ್ಟ ಸತ್ಯವೇನಲ್ಲ. ಜ್ಯೋತಿಷಿಗಳ ಹಿತವಚನಗಳಿಂದಲೂ ಸಾಂತ್ವನಗಳಿಂದಲೂ ಜನರು ಸುದ್ದಿವಾಹಿನಿ ಮೇಲೆ ವಿಶ್ವಾಸ ಹೊಂದುವಂತೆ ತಮ್ಮ ಲಾಭಗಾರಿಕೆ ಹಿತಾಸಕ್ತಿಯನ್ನು ಹೊಂದಿರುವುದು ಮಾಮೂಲಾಗಿದೆ.

ಧಾರ್ಮಿಕ ಕಾರ್ಯಕ್ರಮಗಳ ಜೊತೆಗೆ ಜ್ಯೋತಿಷ್ಯವನ್ನು ಅನುಸಂಧಾನಗೊಳಿಸಿ, ದೇವರನ್ನು ಮಧ್ಯೆ ನಿಲ್ಲಿಸಿ ಮುಂದಿನ ಅನಾಹುತ ತಪ್ಪಿಸುವುದಕ್ಕೆ ನಾನಾರೀತಿಯ ವಿಧಿವಿಧಾನಗಳನ್ನು ನಡೆಸುವುದು, ಪೂಜೆ, ಹೋಮ, ದೇವರ ದರ್ಶನ, ಈ ರೀತಿ ಹೇಳಿ ತಮ್ಮ ಹೇಳಿಕೆಗಳಿಗೆ ಹತ್ತಿರ ಮಾಡಿಕೊಳ್ಳುವುದು. ರಾಜಕಾರಣಿಗಳು, ವ್ಯಾಪಾರಸ್ಥರು, ಮಹಿಳೆಯರು, ಸಂಕಷ್ಟದಲ್ಲಿ ಇರುವವರು, ಈ ವರ್ಗದವರು ತಮ್ಮ ಮುಂದಿನ ಏಳಿಗೆ, ತಮ್ಮ ಸಾರ್ಥಕತೆಯನ್ನು ಪಡೆದುಕೊಳ್ಳಲು ಜ್ಯೋತಿಷಿಗಳನ್ನು ಅತೀವವಾಗಿ ನಂಬಿಕೊಳ್ಳುತ್ತಾರೆ. ಪ್ರಯತ್ನಕ್ಕಿಂತ ಜ್ಯೋತಿಷ್ಯ ಮತ್ತು ದೇವರ ಶಕ್ತಿಯೇ ಕಾರ್ಯಗತಗೊಳಿಸುತ್ತದೆ ಎಂಬ ಗಾಢವಾದ ನಂಬಿಕೆ ಹೊಂದುತ್ತಾರೆ. ಜ್ಯೋತಿಷ್ಯಗಾರರು ದೇವರ ಸ್ವರೂಪ ಅನ್ನುವ ಬಗೆಯಲ್ಲಿ ಪಾತ್ರವಲ್ಲದ್ದನ್ನು ಪಾತ್ರವಾಗಿಸುವ ಪ್ರಯತ್ನ ಮಾಡುತ್ತಾರೆ. ಮಾಧ್ಯಮದಲ್ಲೂ ಸಹ ಬೆಳಿಗ್ಗೆ ಒಂದು ಘಂಟೆ ಅಥವಾ ಒಂದೂವರೆ ಘಂಟೆ ಕಾಲ ಇಂತಹ ಕಾರ್ಯಕ್ರಮ ಬಿತ್ತರಿಸುವ ಅನಿವಾರ್ಯ ಸಂದರ್ಭವನ್ನು ಸೃಷ್ಟಿಸಿಕೊಂಡಿದ್ದಾರೆ. ಹಾಗೆಯೇ ಬೆಳಗಿನ ಜಾವ ಪ್ರೇಕ್ಷಕರನ್ನು ಸೃಷ್ಟಿಮಾಡಿಕೊಂಡಿದ್ದಾರೆ ಅಂದರೆ ತಪ್ಪಾಗಲಾರದು. ಜ್ಯೋತಿಷ್ಯವನ್ನೇ ಕೇಳಿ ತಮ್ಮ ಮುಂದಿನ ಕೆಲಸ ಪ್ರಾರಂಭಿಸುವ ಹಂತಕ್ಕೆ ಜನರು ಬಂದಿದ್ದಾರೆ ಜನರಲ್ಲಿ ಭಯವನ್ನು ಬಿತ್ತುವಂತಹ ಕೆಲಸವನ್ನು ಮಾಡುತ್ತಿದ್ದಾರೆ ಎಂದರೆ ತಪ್ಪಿಲ್ಲ.



Scanned by CamScanner